ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

MD RGRHCL 01 GEN 63 2002 /16159 Dated: 25.07.2012

## ಸುತ್ತೋಲೆ

ವಿಷಯ: : ಬಸವ ವಸತಿ ಯೋಜನೆ, ಇಂದಿರಾ ಆವಾಸ್ ಯೋಜನೆ ಹಾಗೂ ವಾಜಪೇಯಿ ನಗರ ವಸತಿ ಯೋಜನೆಗಳಡಿ 01.04.2012 ನಂತರ ಪ್ರಾರಂಭಿಸಲಾದ ಎಲ್ಲಾ ಮನೆಗಳಿಗೆ ಸಹಾಯಧನವನ್ನು ರೂ. 50,000/- ರಿಂದ 75,000/- ಕ್ಕೆ ಹೆಚ್ಚಿಸಿರುವ ಬಗ್ಗೆ.

ಉಲ್ಲೇಖ 1 ನಿಗಮದ ಪತ್ರ ಸಂಖ್ಯೆ: **MD RGRHCL 34 FIN 18 2012, Dated: 17.05.2012**
2 ಸರ್ಕಾರದ ಆದೇಶ ಸಂಖ್ಯೆ: ವಇ/90/ಹೆಚ್ಎಹೆಚ್/2012, ಬೆಂಗಳೂರು,ದಿನಾಂಕ: 05.07.2012

---

ಸರ್ಕಾರವು 2012-13ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಉಲ್ಲೇಖಿತ ಆದೇಶ(2)ರಲ್ಲಿ ಬಸವ ವಸತಿ ಯೋಜನೆ, ಇಂದಿರಾ ಆವಾಸ್ ಯೋಜನೆ ಹಾಗೂ ವಾಜಪೇಯಿ ನಗರ ವಸತಿ ಯೋಜನೆಗಳಡಿ ಮಂಜೂರಾಗಿರುವ ಮನೆಗಳ ಪೈಕಿ 01.04.2012 ರ ನಂತರ ಪ್ರಾರಂಭಿಸಲಾದ ಮನೆಗಳಿಗೆ ನೀಡಲಾಗುವ ಸಹಾಯಧನವನ್ನು ರೂ. 50,000 ರಿಂದ 75,000 ಕ್ಕೆ ಹೆಚ್ಚಿಸಿ ಆದೇಶವನ್ನು ಹೊರಡಿಸಿದ್ದು, ಸರ್ಕಾರದ ಆದೇಶದಂತೆ ಯೋಜನಾವಾರು ನಿಗಧಿಪಡಿಸಲಾದ ಘಟಕದ ವೆಚ್ಚದ ವಿವರವು ಈ ಕೆಳಗಿನಂತಿದೆ:

| ಯೋಜನೆ | ಘಟಕ ವೆಚ್ಚ | ಸರ್ಕಾರದ ಸಹಾಯಧನ | ಬ್ಯಾಂಕ್ ಸಾಲ | ಫಲಾನುಭವಿಯ ವಂತಿಗೆ |
|---|---|---|---|---|
| ಬಸವ ವಸತಿ ಯೋಜನೆ 10-11 | ರೂ. 1,00,000/- | ರೂ. 75,000/- | ರೂ. 20,000/- | ರೂ. 5,000/- |
| ವಿಶೇಷ ಅಭಿವೃದ್ಧಿ ಯೋಜನೆ 10-11 | ರೂ. 1,00,000/- | ರೂ. 75,000/- | ರೂ. 20,000/- | ರೂ. 5,000/- |
| ಇಂದಿರಾ ಆವಾಸ್ ಯೋಜನೆ 2011-12ನೇ ಶ್ರೇಣಿಯಿಂದ | ರೂ. 1,00,000/- | ರೂ. 75,000/- (ಕೇಂದ್ರ ಸರ್ಕಾರ ರೂ. 33,750/- ರಾಜ್ಯ ಸರ್ಕಾರ ರೂ. 41,250/-) | ರೂ. 20,000/- | ರೂ. 5,000/- |
| ವಾಜಪೇಯಿ ನಗರ ವಸತಿ ಯೋಜನೆ 2010-11ನೇ ಶ್ರೇಣಿಯಿಂದ | ರೂ. 1,80,000/- | ರೂ. 75,000/- | ನನ್ನ ಮನೆ (ISHUP) ಯೋಜನೆಯಡಿ ಅಥವಾ ಬ್ಯಾಂಕುಗಳಿಂದ ಸಾಲ ರೂ. 75,000/- | ರೂ. 30,000/- |

***"ಈ ಸಹಾಯಧನವು ಮೇಲೆ ತಿಳಿಸಿರುವ ಯೋಜನೆಗಳಡಿ ದಿನಾಂಕ: 01.04.2012 ರ ನಂತರ ಪ್ರಾರಂಭಗೊಂಡ ಮನೆಗಳಿಗೆ ಮಾತ್ರ ಅನ್ವಯವಾಗುತ್ತದೆ. ದಿನಾಂಕ: 31.03.2012 ಕ್ಕಿಂತ ಹಿಂದೆ ಪ್ರಾರಂಭವಾಗಿರುವ ಎಲ್ಲಾ ಮನೆಗಳಿಗೆ ಸದರಿ ಆದೇಶವು ಅನ್ವಯವಾಗುವುದಿಲ್ಲ."***

ಅನುದಾನ ಕಂತುಗಳ ಬಿಡುಗಡೆ: ಮೇಲೆ ತಿಳಿಸಿದ ಯೋಜನೆಗಳ ಪೈಕಿ ನಿಗಮದಿಂದ ಫಲಾನುಭವಿಗಳ ಖಾತೆಗೆ ನೇರವಾಗಿ ಅನುದಾನ ವರ್ಗಾವಣೆಗೊಳ್ಳುವ ಯೋಜನೆಗಳನ್ನು ಹೊರತುಪಡಿಸಿ, ಸ್ಥಳೀಯ ಸಂಸ್ಥೆಗಳ ಮೂಲಕ ಅನುದಾನ ಪಾವತಿಯಾಗುವ ಯೋಜನೆಗಳಲ್ಲಿ ಫಲಾನುಭವಿಗಳಿಗೆ ಈ ಮುಂದೆ ತಿಳಿಸಿದಂತೆ ಚೆಕ್ಕುಗಳ ಮೂಲಕ ಅನುದಾನವನ್ನು ಬಿಡುಗಡೆ ಮಾಡುವುದು.

| ಕ್ರ.ಸಂ. | ಹಂತಗಳು | ಬಿಡುಗಡೆ ಮಾಡಬೇಕಾದ ಅನುದಾನ |
|---|---|---|
| 1 | ತಳಪಾಯ ಪೂರ್ಣಗೊಂಡ ನಂತರ | ರೂ. 15,000/- |
| 2 | ಕಿಟಕಿ ಪೂರ್ಣಗೊಂಡ ನಂತರ | ರೂ. 20,000/- |
| 3 | ಛಾವಣಿ ಪೂರ್ಣಗೊಂಡ ನಂತರ | ರೂ. 20,000/- |
| 4 | ಪೂರ್ಣ ಪೂರ್ಣಗೊಂಡ ನಂತರ | ರೂ. 20,000/- |
| | ಒಟ್ಟು | ರೂ. 75,000/- |



ನೋಂದಾಯಿತ ಕಛೇರಿ : #1,2,3,4, ಐ.ಟಿ. ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು – 560 010.

- ಫಲಾನುಭವಿಯ ಸ್ವಂತ ವಂತಿಕೆ: ಫಲಾನುಭವಿಯು ಮನೆ ನಿರ್ಮಾಣ ಸಂದರ್ಭದಲ್ಲಿ ಈ ಮೇಲೆ ತಿಳಿಸಿದಂತೆ ಕನಿಷ್ಠ ವಂತಿಕೆ ಹಣವನ್ನು ವಿನಿಯೋಗಿಸುವುದು ಅತ್ಯವಶ್ಯಕವಿದ್ದು ಈ ಕನಿಷ್ಠ ವಂತಿಕೆ ಹಣವನ್ನು ತೊಡಗಿಸಿಕೊಳ್ಳುವಂತೆ ಫಲಾನುಭವಿಗಳಿಗೆ ತಿಳಿಸುವುದು.

ದಾಖಲೀಕರಣ ಮತ್ತು ಅಡಮಾನ ನೋಂದಣಿ: ದಿನಾಂಕ: 01.04.2012 ರ ನಂತರ ಪ್ರಾರಂಭವಾಗಿರುವ ಮನೆಗಳಿಗೆ ರೂ. 75,000/- ಗಳಿಗೆ ದಾಖಲೀಕರಣ ಮತ್ತು ಅಡಮಾನ ನೋಂದಣಿಯನ್ನು ಮಾಡಿಸುವುದು.

ಒಂದು ವೇಳೆ ದಿನಾಂಕ: 01.04.2012 ರ ನಂತರ ಪ್ರಾರಂಭವಾಗಿರುವ ಮನೆಗಳಿಗೆ ಈಗಾಗಲೇ ಹಿಂದಿನ ಸಹಾಯಧನದ ಮೊತ್ತಕ್ಕೆ ದಾಖಲೀಕರಣ ಮತ್ತು ಅಡಮಾನ ನೋಂದಣಿಯನ್ನು ಮಾಡಿಸಿದ್ದಲ್ಲಿ, ನಮೂನೆ 2ಎ-1 ಮತ್ತು ನಮೂನೆ 3ಎ-1 ರಲ್ಲಿ ಹೆಚ್ಚುವರಿ ಸಹಾಯಧನಕ್ಕೆ ಅಡಮಾನ ನೋಂದಣಿಯನ್ನು ಮಾಡಿಸುವುದು. (ನಮೂನೆ 2ಎ-1 ಮತ್ತು ನಮೂನೆ 3ಎ-1 ಯನ್ನು ಈ ಪತ್ರಕ್ಕೆ ಲಗತ್ತಿಸಿದೆ.) ಆನ್‌ಲೈನ್‌ನಲ್ಲಿ ಛಾವಣಿ ಪ್ರಗತಿಯನ್ನು ನಮೂದಿಸುವ ಮುನ್ನ ಸದರಿ ಫಲಾನುಭವಿಗೆ ನೋಂದಣಿ ಪಡೆದುಕೊಂಡಿರುವ ಬಗ್ಗೆ ಖಾತರಿ ಮಾಡಿಕೊಳ್ಳುವುದು. ಒಂದು ವೇಳೆ ನೋಂದಣಿ ಪಡೆಯದೇ ಪ್ರಗತಿ ನಮೂದಿಸಿ ಅನುದಾನ ಬಿಡುಗಡೆಗೊಂಡಲ್ಲಿ/ಬಿಡುಗಡೆ ಮಾಡಿದ್ದಲ್ಲಿ ನೇರವಾಗಿ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳ ಆಯುಕ್ತರು/ಮುಖ್ಯಾಧಿಕಾರಿಗಳು/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿಗಳೇ ನೇರ ಹೊಣೆಗಾರರಾಗುತ್ತಾರೆ.

ಬ್ಯಾಂಕ್ ಸಾಲ: ಫಲಾನುಭವಿಗಳಿಗೆ ಒಂದು ವೇಳೆ ಮನೆ ನಿರ್ಮಿಸಿಕೊಳ್ಳಲು ಬ್ಯಾಂಕಿನ ಸಾಲದ ಅವಶ್ಯಕತೆ ಇದ್ದಲ್ಲಿ, ಆಯಾ ಸ್ಥಳೀಯ ಸಂಸ್ಥೆಗಳು ಆಯಾ ಸ್ಥಳದಲ್ಲಿ ಲಭ್ಯವಿದ್ದ ಬ್ಯಾಂಕುಗಳಿಂದ ಫಲಾನುಭವಿಗಳಿಗೆ ಸಾಲ ದೊರಕಿಸಿಕೊಡಲು ಸೂಕ್ತ ಕ್ರಮ ಕೈಗೊಳ್ಳುವುದು. ಗ್ರಾಮೀಣ ಪ್ರದೇಶದಲ್ಲಿ ಡಿಆರ್‌ಐ ಯೋಜನೆಯಡಿ ಬ್ಯಾಂಕುಗಳು ಕಡಿಮೆ ಬಡ್ಡಿ ದರಲ್ಲಿ ಸಾಲ ಸೌಲಭ್ಯವನ್ನು ಒದಗಿಸುತ್ತಿದ್ದು ಇದರ ಸೌಲಭ್ಯವನ್ನು ಪಡೆಯಲು ತಿಳಿಸಿದೆ. ಬ್ಯಾಂಕಿನಿಂದ ಸಾಲ ಪಡೆದುಕೊಳ್ಳುವ ಸಂಪೂರ್ಣ ಜವಾಬ್ದಾರಿ ಫಲಾನುಭವಿಯದ್ದಾಗಿರುತ್ತದೆ. ಫಲಾನುಭವಿಗೆ ಸಾಲದ ಅವಶ್ಯಕತೆ ಇಲ್ಲದಿದ್ದಲ್ಲಿ ತನ್ನ ಸ್ವಂತ ವಂತಿಕೆ ಮತ್ತು ಸರ್ಕಾರದ ನೀಡಲಾಗುವ ಸಹಾಯಧನದ ಮೊತ್ತದಿಂದ ಮನೆಯನ್ನು ನಿರ್ಮಿಸಿಕೊಳ್ಳಬಹುದಾಗಿದೆ.

ಮನೆ ನಿರ್ಮಾಣವನ್ನು ಯಾವುದಾದರು ನಿರ್ಮಾಣ ಸಂಸ್ಥೆಗೆ ವಹಿಸಿದಲ್ಲಿ: ಫಲಾನುಭವಿಯು ತನ್ನ ಮನೆಯನ್ನು ಸ್ವತಃ ತಾನೇ ನಿರ್ಮಿಸಿಕೊಳ್ಳಲು ಸಾಮರ್ಥ್ಯ ಇಲ್ಲದೆ ಇದ್ದ ಪಕ್ಷದಲ್ಲಿ ಮತ್ತು ನಿರ್ಮಾಣ ಕಾಮಗಾರಿಯನ್ನು ಯಾವುದಾದರು ಸರ್ಕಾರದ ನಿರ್ಮಾಣ ಸಂಸ್ಥೆಗಳಿಗೆ ಅಂದರೆ ನಿರ್ಮಿತಿ ಕೇಂದ್ರ ಅಥವಾ ಭೂಸೇನಾ ನಿಗಮಕ್ಕೆ ವಹಿಸಿಕೊಟ್ಟಲ್ಲಿ ಫಲಾನುಭವಿಯು ತನ್ನ ಸ್ವಯಂ ವಂತಿಕೆಯನ್ನು ಕಡ್ಡಾಯವಾಗಿ ಮನೆಯ ಕಾಮಗಾರಿಯನ್ನು ಪ್ರಾರಂಭಿಸುವ ಮುನ್ನ ಗ್ರಾಮೀಣ ಪ್ರದೇಶವಾದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ ನಗರ ಪ್ರದೇಶವಾದಲ್ಲಿ ಆಯುಕ್ತರು/ಮುಖ್ಯಾಧಿಕಾರಿಗಳು ಇವರಿಗೆ ಪಾವತಿಸುವುದು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು/ ಆಯುಕ್ತರು/ಮುಖ್ಯಾಧಿಕಾರಿಗಳು ಇದಕ್ಕಾಗಿ ಪ್ರತ್ಯೇಕವಾದ ಖಾತೆಯನ್ನು ತೆರೆದು ಆ ಖಾತೆಯಲ್ಲಿ ಫಲಾನುಭವಿಯ ವಂತಿಕೆಯನ್ನು ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ.

ಮನೆ ನಿರ್ಮಾಣದ ವೆಚ್ಚ: ತನ್ನ ಮನೆಯನ್ನು ಸ್ವತಃ ತಾನೇ ನಿರ್ಮಿಸಿಕೊಳ್ಳುವ ಫಲಾನುಭವಿಯು ಸರ್ಕಾರದಿಂದ ನೀಡುವ ಸಹಾಯಧನದ ಮೊತ್ತದ ಜೊತೆಗೆ ಬ್ಯಾಂಕ್ ಸಾಲ ಹಾಗೂ ತನ್ನ ಸ್ವವಂತಿಕೆಯನ್ನು ಬಳಸಿಕೊಂಡು ಸರ್ಕಾರದಿಂದ ನೀಡುವ ಸಹಾಯಧನದ ಗರಿಷ್ಠ ಮೂರರಷ್ಟರವರೆಗಿನ ಮೊತ್ತದಷ್ಟು ವೆಚ್ಚದ ಮನೆಯನ್ನು ನಿರ್ಮಿಸಿಕೊಳ್ಳಬಹುದಾಗಿರುತ್ತದೆ.

ಮನೆ ನಿರ್ಮಾಣದ ವಿಸ್ತೀರ್ಣ: ಮನೆಯ ನಿರ್ಮಾಣದ ಘಟಕ ವೆಚ್ಚ ಹೆಚ್ಚಾಗಿರುವುದರಿಂದ ನಿರ್ಮಾಣದ ವಿಸ್ತೀರ್ಣವನ್ನು ಪರಿಷ್ಕರಿಸಿದ್ದು, ಫಲಾನುಭವಿಯು ಹೊಂದಿರುವ ನಿವೇಶನದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕನಿಷ್ಠ 250 ಅಡಿ, ನಗರ ಪ್ರದೇಶದಲ್ಲಿ ಕನಿಷ್ಟ 285 ಅಡಿ ಹಾಗೂ ಗರಿಷ್ಟ 1200 ಅಡಿಗಳವರೆಗೆ (ನಿಯಮಾನುಸಾರ ಬಿಡಬೇಕಾದ ಸುತ್ತಳತೆಯನ್ನು ಹೊರತುಪಡಿಸಿ) ಮನೆಯನ್ನು ನಿರ್ಮಿಸಿಕೊಳ್ಳಬಹುದಾಗಿರುತ್ತದೆ. ಆದರೆ ನಿರ್ಮಾಣಗೊಳ್ಳುವ ಮನೆಯ ಒಟ್ಟು ವೆಚ್ಚವು ಸರ್ಕಾರದಿಂದ ನೀಡುವ ಸಹಾಯಧನದ ಗರಿಷ್ಟ ಮೂರರಷ್ಟರವರೆಗಿನ ಮೊತ್ತವನ್ನು ಮೀರತಕ್ಕದ್ದಲ್ಲ.

ತಮ್ಮ ವಿಶ್ವಾಸಿ,

N. S. [signature]

ಎನ್ ಎಸ್ ಮಹಾದೇವ ಪ್ರಸಾದ್

ವ್ಯವಸ್ಥಾಪಕ ನಿರ್ದೇಶಕರು (ಪ್ರಭಾರ)

ಗೆ,
ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳು,
ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
ರಾಜ್ಯದ ಎಲ್ಲಾ ತಾಲ್ಲೂಕು ಕಛೇರಿಗಳ ತಹಶೀಲ್ದಾರರು,
ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳು.
ರಾಜ್ಯದ ಎಲ್ಲಾ ತಾಲ್ಲೂಕು ಕಛೇರಿಗಳ ಉಪ ನೋಂದಣಾಧಿಕಾರಿಗಳು,
ರಾಜ್ಯದ ಎಲ್ಲಾ ತಾಲ್ಲೂಕು ನೋಡಲ್ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ,
ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಗಳು – ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ ಇವರ ಮುಖಾಂತರ.